ಶ್ರೀ ಬಿ ಎಸ್ ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು)

ಅ) ಸಾರಾಯಿ ಮಾರಾಟದ ನಿಷೇಧವನ್ನು ದಿನಾಂಕ 01–07–2007 ರಿಂದ ಜಾರಿಗೆ ತರಲಾಗುವುದು

ಹಿಂದಿನ ಆರ್ಥಿಕ ವರ್ಷ, ಅಂದರೆ 2005–06 ನೇ ಸಾಲಿನಲ್ಲಿ ಸಾರಾಯಿ ಮಾರಾಟದಿಂದ ಸರ್ಕಾರಕ್ಕೆ ರೂ 1565 43 ಕೋಟಿಗಳಷ್ಟು ವರಮಾನ ಬಂದಿದೆ

ಆ) ಇಲ್ಲ

1371 (2032) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಅರ್ಜಿದಾರ ರೈತರಿಗೆ ಅವರ ಹಕ್ಕುಗಳನ್ನು ಊರ್ಜಿತಗೊಳಿಸುವ ಅಧಿಕಾರೇತರ ಸಮಿತಿಗಳನ್ನು ರಾಜ್ಯದ ಎಷ್ಟು ತಾಲ್ಲೂಕುಗಳಲ್ಲಿ ರಚಿಸಲಾಗಿದೆ,

ಆ) ಈ ಕಾರ್ಯಾಚರಣೆಯನ್ನು ರಾಜ್ಯದಾದ್ಯಂತ ಎಷ್ಟು ವರ್ಷಗಳಲಿ ಪೂರೈಸಬೇಕೆಂದು ಸರ್ಕಾರ ಯೋಚಿಸಿದೆ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಈಗಾಗಲೇ 119 ತಾಲ್ಲೂಕುಗಳಿಗೆ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳಿಗೆ ಅಧಿಕಾರೇತರ ಸದಸ್ಯರನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ

ಆ) ಈ ಕಾರ್ಯಚರಣೆ ಪೂರೈಸಲು ದಿನಾಂಕ 26–04–2008 ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ

1372 (2033) ಶ್ರೀ ರಮೇಶ್ ಕುಮಾರ್ ಕೆ ಆರ್ (ಶ್ರೀನಿವಾಸಪುರ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀನಿವಾಸಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅರಣ್ಯ ಭೂಮಿ ಅತಿಕ್ರಮಣ ಆಗಿರುವ ಪ್ರಕರಣಗಳು ಎಷ್ಟು,

ಆ) ಇವುಗಳ ಪೈಕಿ ಸಾರ್ವಜನಿಕರ ದೂರುಗಳ ಆಧಾರದ ಮೇಲೆ ನೋಂದಾಯಿಸಲಾದ ಪ್ರಕರಣಗಳು ಎಷ್ಟು, ಮತ್ತು ಅರಣ್ಯ ಅಧಿಕಾರಿಗಳ ಫಿರ್ಯಾದಿನ ಮೇಲೆ ನೋಂದಾಯಿಸಲಾಗಿರುವ ಪ್ರಕರಣಗಳು ಎಷ್ಟು,

ಇ) ಕಂದಾಯ ಇಲಾಖೆಯ ದಾಖಲೆಗಳನ್ನು ಪ್ರಶ್ನಿಸಿರುವ ಮತ್ತು ಅರಣ್ಯ ಇಲಾಖೆಯ ನಡುವೆ ಇರುವ ಪ್ರಕರಣಗಳು ಎಷ್ಟು,

ಈ) ಯಾವುದೇ ದಾಖಲೆಗಳು ಇಲ್ಲದೇ ನೇರವಾಗಿ ದೌರ್ಜನ್ಯದಿಂದ ಅರಣ್ಯ ಪ್ರದೇಶ ಅತಿಕ್ರಮಿಸಿರುವ ಪ್ರಕರಣಗಳು ಎಷ್ಟು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) .

ಅ) 92 ಪ್ರಕರಣಗಳು

ಆ) 1) ಸಾರ್ವಜನಿಕ ದೂರುಗಳ ಆಧಾರದ ಮೇಲೆ ನೋದಾಯಿಸಲಾದ ಪ್ರಕರಣಗಳು — ಲಿಖಿತ ಮೂಲಕ 1 ಪ್ರಕರಣ; ಮೌಖಿಕ ಮೂಲಕ 5 ಪ್ರಕರಣಗಳು; **ಒಟ್ಟು 6 ಪ್ರಕರಣಗಳು**

2) ಅರಣ್ಯ ಅಧಿಕಾರಿಗಳ ಫಿರ್ಯಾದಿನ ಮೇಲೆ ನೋಂದಾಯಿಸಲಾಗಿರುವ ಪ್ರಕರಣಗಳು — **86 ಪ್ರಕರಣಗಳು**

ಇ) 205 ಪ್ರಕರಣಗಳು

ಈ) 13 ಪ್ರಕರಣಗಳು

1373 (1941) ಶ್ರೀ ರವಿ ಸಿ ಟಿ (ಚಿಕ್ಕಮಗಳೂರು) – ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳೀಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನುಮತಿ ಪಡೆದಿರುವ ಲಾಟರಿ ಉದ್ಯಮಿಗಳ ಸಂಖ್ಯೆ ಎಷ್ಟು,

ಆ) ಯಾವ ಯಾವ ರಾಜ್ಯಗಳಿಗೆ ಲಾಟರಿ ಮಾರಾಟಕ್ಕೆ ನಮ್ಮ ರಾಜ್ಯದಲ್ಲಿ ಅವಕಾಶ ನೀಡಲಾಗಿದೆ,